**ಸೆಪ್ಟೆಂಬರ್ 23 , 2016**

**ಯಾವುದೇ ಒಳಾಕ್ಷರ ಇಲ್ಲದಿರುವ , ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಆರೋಹಣ ಮಾದರಿಯಲ್ಲಿರುವ, ಉಬ್ಬು ಮುದ್ರಣ ಇಲ್ಲದಿರುವ ₹ 20 ಮೌಲ್ಯ ವರ್ಗದ ಬ್ಯಾಂಕ್ ನೋಟುಗಳ ನೀಡಿಕೆ .**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ.ರಘುರಾಮ್ ಜಿ ರಾಜನ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2016 ಮುದ್ರಿಸಿರುವ ಮತ್ತು ಎರಡೂ ಬದಿಯ ಸಂಖ್ಯಾಕಣಗಳಲ್ಲಿ ಯಾವುದೇ ಒಳಾಕ್ಷರ ಇಲ್ಲದಿರುವ ಮಹಾತ್ಮಾ ಗಾಂಧಿ ಶ್ರೇಣಿ -2005 ರ, ₹ 20 ರ ಬ್ಯಾಂಕು ನೋಟುಗಳನ್ನು ಶೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ.

ಈಗ ನೀಡಲಿರುವ ನೋಟುಗಳ ವಿನ್ಯಾಸ ಮತ್ತು ಭದ್ರತಾ ವ್ಯಶಿಷ್ಟಗಳು ಇತ್ತೀಚೆಗೆ ನೀಡಲಾದ ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಆರೋಹಣ ಮಾದರಿಯಲ್ಲಿರುವ , ಉಬ್ಬು ಮುದ್ರಣ ಇಲ್ಲದಿರುವ , ಗುಪ್ತ ಚಿತ್ರ ಇಲ್ಲದಿರುವ ಹಾಗೂ ಗುರುತು ಚಿನ್ಹೆಯನ್ನು ಹೊಂದಿಲ್ಲದ , ಮಹಾತ್ಮಾ ಗಾಂಧಿ ಶ್ರೇಣಿ -2005 ರ ₹ 20 ಬ್ಯಾಂಕು ನೋಟುಗಳಂತಯೇ ಇರುತ್ತವೆ. ಉಬ್ಬು ಮುದ್ರಣವನ್ನು ತೆಗೆದಿರುವ ಕಾರಣ ನೋಟಿನ ಮುಂಭಾಗದ ವರ್ಣವು ತಿಳಿದಾಗಿರುತ್ತದೆ (ಉಲ್ಲೇಖ : ಪತ್ರಿಕಾ ಪ್ರಕಟಣೆ ಸಂಖ್ಯೆ 2016-2017/678 ದಿನಾಂಕ ಸೆಪ್ಟೆಂಬರ್ 15 , 2016 )

ಈ ಹಿಂದೆ ನೀಡಲಾದ ₹ 20 ರ ಮೌಲ್ಯವರ್ಗದ ಎಲ್ಲಾ ನೋಟುಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

**ಅಜಿತ್ ಪ್ರಸಾದ್**
**ಸಹಾಯಕ ಸಲಹೆಗಾರರು**

**ಪತ್ರಿಕಾ ಪ್ರಕಟಣೆ : 2016-2017/757**